ಆಕೆಯಂತೂ ಮೊದಲಿನಿಂದ ನೀನು ಬಂದದ್ದು ಇಲ್ಲಿರೋದು ಎಲ್ಲ ಮೊದಲೇ ಗೊತ್ತಿತ್ತು ಎಂಬಂತೆ ನಡೆದುಕೊಳ್ಳತೊಡಗಿದಳು.

ಕುರ್ಚಿಯಲ್ಲಿ ಕೂತು ಕಾಲಾಡಿಸತೊಡಗಿದ. ಕಾಲು ಕುಣಿತ ಬರಬರುತ್ತಾ ಜಾಸ್ತಿಯಾಗತೊಡಗಿ ಆಕೆ ಅದನ್ನ ನೋಡಿದ್ದೇ ಛಕ್ ಅಂತ ನಿಂತು ಹೋಯಿತು.

ಆಕೆ ಅಡಿಗೆ ಮನೆಯನ್ನ ವಶಕ್ಕೆ ತೆಗೆದುಕೊಂಡಿದ್ದಳು. ಕಸ ಹೊಡೆಯ ಹತ್ತಿದ್ದರಿಂದ ದೂಳಿನ ಮೋಡದಲ್ಲಿ ಕೂತ ಇವನು 2–3 ಬಾರಿ ಕೆಮ್ಮಿದ. ಎದ್ದು ಹೋಗು ಎಂಬಂಥ ನೋಟ ಅದು– ಎಂದು ಹೊರಗಿನ ವರಾಂಡಕ್ಕೆ ಹೋದ. ಕಸ ಗುಡಿಸಿ, ಒರೆಸಿ, ಮನೆಯ ಅನೇಕ ವಸ್ತುಗಳನ್ನ ಒಂದು ತಹಬಂದಿಗೆ ಆಕೆ ತಂದಾಗ ಅವನು ಅಪರಾಧಿಯಂತಿದ್ದ.

ಆಕೆ ಮೌನವಾಗಿ ಕೆಲಸಕ್ಕಿಳಿದಿದ್ದಳು. ಈತ ಅವಳ ಚಾಲೂಕನ್ನ ನೋಡುತ್ತ ಆಗೀಗ ಸಹಾಯಕ್ಕೆ ನುಗ್ಗುತ್ತಿದ್ದ. ಆದರೆ ಆಕೆ ಮೌನ ಗೌರಿ. ದುರು ದುರು ನೋಡಿಗಾಗ ತೆಪ್ಪಗಾಗುತ್ತಿದ್ದ. ಒಮ್ಮೆ ಮಂಚದ ಕೆಳಗೆ ಕಸ ಗುಡಿಸುವಾಗ ಒಂದು ಪೆಟ್ಟಿಗೆ ಸರಿಸಬೇಕಾಯ್ತು. ಪ್ರಕಾಶ್ ಅದನ್ನ ಸರಿಸಾಡುವ ಗಲಾಟೆಯಲ್ಲಿ ಆಯತಪ್ಪಿ ಬಿದ್ದ. ಆಕೆಗೆ ಡಿಕ್ಕಿ ಕೊಟ್ಟ. ಕಸಬರಲು ಹಿಡಿದಾಕೆ ಅದರಿಂದ ಬಾರಿಸಿ

